# ಶ್ರೀ ಮ ದ್ ಜ ಯ ತೀ ರ್ಥ ಗು ರು ಭ್ಯೋ ನ ಮಃ

**ಚಿತ್ರೈಃ ಪದೈಶ್ಚ ಗಂಭೀರೈಃ ವಾಕ್ಯೈರ್ಮಾನೈರಖಂಡಿತೈಃ ।**
**ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ॥**

ವ್ಯಾಕರಣಾದಿಸಂಸ್ಕಾರಯುಕ್ತವಾದ ಪದಗಳಿಂದಲೂ, ಆಳವಾದ ಅರ್ಥ–ವುಳ್ಳ ವಾಕ್ಯಗಳಿಂದಲೂ ಪರವಾದಿಗಳಿಂದ ಖಂಡಿಸಲಶಕ್ಯವಾದ ಪ್ರತ್ಯಕ್ಷಾದಿ ಪ್ರಮಾಣ–ಗಳಿಂದಲೂ (ಕೂಡಿದ) ಮತ್ತು ಗುರುಗಳಾದ ಶ್ರೀ ಮದಾಚಾರ್ಯರ ಹೃದಯವನ್ನು ಚೆನ್ನಾಗಿ ಪ್ರಕಟಮಾಡುವ ಶ್ರೀಜಯತೀರ್ಥಮಚ್ಚರಣರ ಮಾತು ಶೋಭಿಸುತ್ತದೆ.

**ಯಸ್ಯ ವಾಕ್ಕಾಮಧೇನುರ್ನಃ ಕಾಮಿತಾರ್ಥಾನ್ ಪ್ರಯಚ್ಛತಿ ।**
**ಸೇವೇ ತಂ ಜಯಯೋಗೀಂದ್ರಂ ಕಾಮಬಾಣಚ್ಛಿದಂ ಸದಾ ॥**

ಕಾಮಧೇನುವಿನಂತೆ ನಮಗೆ ಅಭೀಷ್ಟಗಳನ್ನು ಪೂರೈಸುವ ಸದ್ವಾಕ್ಯ–ಜಾಲಗಳುಳ್ಳ ಕಾಮಬಾಣಗಳನ್ನು ಗೆದ್ದ ಶ್ರೀಮಜ್ಜಯತೀರ್ಥ ಗುರುಗಳನ್ನು ಸೇವಿಸುತ್ತೇನೆ.

**ರಾ ಗ – ಶ ಂ ಕ ರಾ ಭ ರ ಣ : ತಾ ಳ – ಅ ಟ ತಾ ಳ**

ಸಾರಿ ಭಜಿಸಿರೊ ಟೀಕಾರಾಯರಂಘ್ರಿಯ। ಘೋರಪಾತಕಾಂಬುಧಿಯ ಪಾರಮಾಳ್ಪರ । ಪ ।
ಮೋದತೀರ್ಥರ ಮತವ ಸಾಧಿಸುವರ । ಪಾದಸೇವ್ಯರ ದುರ್ಬೋಧ ಕಳೆವರ । ೧ ।
ಭಾಷ್ಯತತ್ವವ ವಿಸ್ತಾರ ಮಾಳ್ಪರ । ದೋಷದೂರರ ಆದಿಶೇಷಾವೇಶರ । ೨ ।
ಕಾಮಗೆದ್ದರ ಹರಿಗೆ ಪ್ರೇಮಪೂರ್ಣರ । ನೇಮನಿತ್ಯರ ನಿಷ್ಕಾಮನಾಪರ । ೩ ।
ಮೋಕ್ಷದಾತರ ಅಕ್ಷೋಭ್ಯತೀರ್ಥರ । ಸಾಕ್ಷಿಲಿಪ್ಪರ ಅಪೇಕ್ಷರಹಿತರ ।೪ ।
ವಿಜಯವಿಟ್ಠಲನ ಅಂಘ್ರಿ ಭಜನೆ । ಮಾಳ್ಪರ ಕುಜನಭಂಜರ ದಿಗ್ವಿಜಯರಾಯರ । ೫ ।

**ರಾ ಗ – ಆ ನ ಂ ದ ಭೈ ರ ವಿ : ತಾ ಳ – ಮಿ ಶ್ರ ಛಾ ಪು ತಾ ಳ**

ಟೀಕಾಚಾರ್ಯರ ಪಾದಸೋಕಿದ ಕೊನೆಧೂಳಿ । ತಾಕಿದ ಮನುಜರಿಗೆ । ಪ ।
ಕಾಕುಗೊಳಿಸುವ ಅನೇಕ ಪಾಪಂಗಳ । ನೂಕಿ ಬಿಸಾಡಲು ಸಾಕಾರ ಉಳ್ಳಂಥ।ಅಪ ।
ಮಧ್ವಮತವೆಂಬೊ ದುಗ್ಧಾಬ್ಧಿಯೊಳು ಉದ್ಭವಿಸಿದ ಚಂದ್ರನೊ
ಅದ್ವೈತಮತವನಛೇದನ ಕುಠಾರ ವಿದ್ಯಾರಣ್ಯನ ಗರ್ವಕ್ಕೆ ಪರಿಹಾರ । ೧ ।
ತತ್ವವಾರಿಧಿಸಾರ ತತ್ವಸುಧಾಭಾಷ್ಯ ವಿಸ್ತಾರವಾಗಿರಲು
ಚಿತ್ತವಿಟ್ಟು ಮಾಡಿ ಟೀಕಾವನ್ನು ಸುತ್ತೇಳು ಜಗಕೆಲ್ಲ ಪ್ರಕಟಿಸಿ ಮೆರೆದಂಥ । ೨ ।

# ಶ್ರೀ ಮ ದ್ ಜ ಯ ತೀ ರ್ಥ ಗು ರು ಭ್ಯೋ ನ ಮಃ

ಎಂದಿಗಾದರು ಒಮ್ಮೆ ಕೊನೆ ನಾಲಿಗೆಯಿಂದ ಬಿಂದು ಮಾತ್ರದಿ ನೆನೆಯೆ
ಮಂದಮತಿಗಾದರು ಅಜ್ಞಾನ ನಾಶನ ಸಂದೇಹವಿಲ್ಲವಯ್ಯ ಸ್ಮರಣೆ ಮಾಡಿದ ಮೇಲೆ ।೩।
ಜ ಎಂದು ನುಡಿಯಲು ಜಯಶೀಲನಾಗುವ ಯ ಎಂದು ನುಡಿಯಲು ಯಮನಂಜುವ
ತೀ ಎಂದು ನುಡಿಯಲು ತಿಮಿರ ಪಾತಕ ಹಾನಿ
ರ್ಥ ಎಂದು ನುಡಿದರೆ ತಾಪತ್ರಯ ಪರಿಹಾರ । ೪ ।
ಯೋಗಿ ಅಕ್ಷೋಭ್ಯರ ಕರಕಮಲ ಸಂಜಾತ ಭಾಗವತರ ಪ್ರಿಯನೆ
ಕಾಗಿಣೆ ತೀರದ ಮಳಖೇಡ ನಿವಾಸ ಶ್ರೀಗುರು ವಿಜಯವಿಟ್ಠಲನ ಸೇವಕದಾಸ

**ರಾ ಗ – ಆ ನ ಂ ದ ಭೈ ರ ವಿ : ತಾ ಳ : ಆ ದಿ ತಾ ಳ**

ಎದುರಾರ್‍ೈ ಗುರುವೆ ಸಮರಾರ್‍ೈ । ಪ ।
ಮದನ ಗೋಪಾಲನ ಪ್ರಿಯ ಜಯರಾಯ । ಅ ಪ ।
ಕಡುಗರ್ಜಿಸುವ ಕೇಸರಿಯಂತೆ ನಿಮ್ಮ ವಾದ ಗಡಣೆಯ ಕೇಳುತ ನುಡಿ ಮುಂದೋಡದೆ
ಗಡಗಡ ನಡುಗುತ ಮಾಯ್ಗೋಮಾಯ್ಗಳು ಅಡವಿಯೊಳಡಗೋರು ನಿಮ್ಮ ಭೀತಿಯಲಿ। ೧ ।
ಕುಟಿಲ ಮತಗಳೆಂಬೊ ಚಟುಲಂಧಕಾರಕ್ಕೆ ಪಟುತರ ತತ್ವಪ್ರಕಾಶಿಕೆಯೆಂತೆಂಬ
ಚಟುಲತಾಪದಿಂದ ಖಂಡಿಸಿ ತೇಜೋತ್ಕಟದಿ ಮೆರೆದ ಬುಧಕಟಕಾಬ್ಜ ಮಿತ್ರ । ೨ ।
ಅಮಿತ ದ್ವಿಜಾವಳಿ ಕುಮುದಗರಳಿಸಿ ವಿಮತರ ಮುಖಕಮಲಂಗಳ ಬಾಡಿಸಿ
ಸ್ವಮತರ ಹೃತ್ಸಂತಾಪಗಳೋಡಿಸಿವಿಮಲ ಸುಕೀರ್ತಿಯ ಪಡೆದೆಯೋ ಚಂದ್ರ । ೩ ।
ವೇದಶಾಸ್ತ್ರಗಳೆಂಬೊ ಶೃಂಗಗಳಿಂದ ಸುಧಾದಿ ಗ್ರಂಥಗಳೆಂಬೊ ಸ್ತನದಿಂದೊಪ್ಪುತ ತತ್ವ–
ಬೋಧನೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ ಆದರದಲಿ ಕೊಟ್ಟ ಯತಿಸುರಧೇನು । ೪ ।
ವ್ಯಾಸಸೂತ್ರಗಳೆಂಬ ಮಂದರವನು ವೇದ ರಾಶಿಯೆಂಬ ವಾರಾಶಿಯೊಳಿಟ್ಟು
ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ । ೫ ।
ವನಜನಾಭನ ಗುಣಮಣಿಗಳು ಸರ್ವಜ್ಞಮುನಿಕೃತ ಗ್ರಂಥಗಳವನಿಯೊಳಗಡೆ
ಸಜ್ಜನರಿಗೆ ಟೀಕಾಂಜನದಿಂದ ತೋರಿಸಿ ಘನ ಸುಖಸಾಧನ ಮಾಡಿದ್ಯೋ ಧೀರ । ೬ ।
ಅರ್ಥಿಮಂದಾರ ವೇದಾರ್ಥವಿಚಾರ ಸಮರ್ಥ ಶ್ರೀಕೃಷ್ಣ ಪಾದಾಂಬುಜಲೋಲ
ಪ್ರತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯತೀರ್ಥ ಕರಜ ಜಯತೀರ್ಥ ಯತೀಂದ್ರ । ೭ ।